# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿನ ಭೂ ವಿಜ್ಞಾನಿಗಳಿಗೆ ಮಾಸಿಕ ಸಂಚಿತ ವೇತನವನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರ ಆದೇಶ ಸಂಖ್ಯೆ. ಗ್ರಾಅಪ 15 ಜಿಪಅ 1998, ದಿನಾಂಕ. 01-01-2003.
2. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 34 ಜಿಪಅ 2004, ದಿನಾಂಕ. 11-07-2006.
3. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 207 ಸೇಶಿಕಾ 2007, ದಿನಾಂಕ. 25-08-2007.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಜ್ಞಾಪನ ಪತ್ರ ಸಂಖ್ಯೆ. ಮುಇಂ/ಪಂರಾಇಂಇ/ಸಿ-9/56/ಮಾ.ಸಂ.ವೇ/ ಸ.ಭೂ.ವಿ. /ಸಕ್ರಮ/ 2008-09/5483, ದಿನಾಂಕ. 22-11-2008.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಜ್ಞಾಪನ ಪತ್ರ ಸಂಖ್ಯೆ. ಮುಇಂ/ಪಂರಾಇಂಇ/ಸಿ-9/191/ಮಾ.ಸಂ.ವೇ.ಸಿ/.ಭೂ.ವಿ. /ಸಕ್ರಮ/ 2010-11/8862, ದಿನಾಂಕ. 31-12-2011.
6. ಮಾಸಿಕ ಸಂಚಿತ ವೇತನ ಭೂ ವಿಜ್ಞಾನಿಗಳ ಮನವಿ ದಿನಾಂಕ. 08-06-2012.

**ಪ್ರಸ್ತಾವನೆ:**

ದಿನಾಂಕ. 1-7-84ರ ನಂತರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿದ್ದ 30 ಜನ ಭೂ ವಿಜ್ಞಾನಿಗಳಿಗೆ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ. 01-01-2003ರ ಆದೇಶದಲ್ಲಿ ಮಾಸಿಕ ಸಂಚಿತ ವೇತನವನ್ನು ರೂ. 5000-00 ಗಳಿಗೆ ನಿಗದಿಪಡಿಸಲಾಗಿತ್ತು. ನಂತರ ಮೇಲೆ ಕ್ರಮ ಸಂಖ್ಯೆ. (2) ರಲ್ಲಿ ಓದಲಾದ ದಿನಾಂಕ. 11-07-2006ರಲ್ಲಿ ರೂ. 5,990-00ಗಳನ್ನು ಹಾಗೂ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ. 25-08-2007ರ ಆದೇಶದಲ್ಲಿ ರೂ. 11390-00 ಗಳನ್ನು ಮಾಸಿಕ ವೇತನ ಸಂಚಿತ ವೇತನವನ್ನಾಗಿ ನಿಗದಿಪಡಿಸಲಾಗಿತ್ತು.

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರು ಭೂ ವಿಜ್ಞಾನಿ ವೃಂದದಲ್ಲಿ ಲಭ್ಯವಿದ್ದ ಖಾಲಿ ಹುದ್ದೆಗಳನುಸಾರ ಮೇಲೆ ಕ್ರಮ ಸಂಖ್ಯೆ. (4) ಮತ್ತು (5) ರಲ್ಲಿ ಓದಲಾದ ದಿನಾಂಕ. 22-11-2008 ಮತ್ತು 31-12-2011ರ ಜ್ಞಾಪನ ಪತ್ರದ ಮೂಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮಾಸಿಕ ಸಂಚಿತ ವೇತನದ 30 ಮಂದಿ ಭೂ ವಿಜ್ಞಾನಿಗಳ ಪೈಕಿ 16 ಮಂದಿ ಭೂ ವಿಜ್ಞಾನಿಗಳ ಸೇವೆಯನ್ನು ಸಕ್ರಮಗೊಳಿಸಿರುತ್ತಾರೆ ಹಾಗೂ ಒಬ್ಬ ಭೂ ವಿಜ್ಞಾನಿಯು ಮೃತಪಟ್ಟಿರುತ್ತಾರೆ. ಹಾಗಾಗಿ ಪ್ರಸ್ತುತ 13 ಮಂದಿ ಭೂ ವಿಜ್ಞಾನಿಗಳು ಮಾಸಿಕ ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿದ್ದಾರೆ.

---2

ಮೇಲ್ಕಂಡ 13 ಮಂದಿ ಭೂ ವಿಜ್ಞಾನಿಗಳು ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ದಿನಾಂಕ. 08-06-2012ರಂದು ಸಲ್ಲಿಸಿರುವ ಮನವಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 7 ಎಸ್‌ಆರ್‌ಪಿ 11, ದಿನಾಂಕ. 21-04-2012ರಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಭೂ ವಿಜ್ಞಾನಿ ವೃಂದದ ಹಿಂದಿನ ವೇತನ ಶ್ರೇಣಿ ರೂ. 11400 – 21600 ರ ವೇತನ ಶ್ರೇಣಿಯು ಪರಿಷ್ಕೃತಗೊಂಡು ರೂ. 22,800 – 43200 ಗಳಿಗೆ ನಿಗಧಿಗೊಳಿಸಲಾಗಿರುವುದರಿಂದ ವೇತನ ಶ್ರೇಣಿಯ ಮೂಲ ವೇತನ ರೂ. 22,800-00 ರಲ್ಲಿ ರೂ. 10-00 ನ್ನು ಕಡಿತಗೊಳಿಸಿ ರೂ. 22,790-00ಗಳನ್ನು ಮಾಸಿಕ ಸಂಚಿತ ವೇತನ ನಿಗಧಿಗೊಳಿಸಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ, ಸರ್ಕಾರವು ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಸಂಚಿತ ವೇತನದ 13 ಭೂ ವಿಜ್ಞಾನಿಗಳು ಹಾಲಿ ಪಡೆಯುತ್ತಿರುವ ಮಾಸಿಕ ಸಂಚಿತ ವೇತನ ರೂ. 11390-00ಗಳಿಗೆ ಬದಲಾಗಿ ರೂ. 22,790-00 ಗಳನ್ನು ಸಂದಾಯ ಮಾಡಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಗ್ರಾಅಪ 251 ಜಿಪಅ 2012, ಬೆಂಗಳೂರು, ದಿನಾಂಕ. 28-09-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ 13 ಮಂದಿ ಸಂಚಿತ ವೇತನ ಪಡೆಯುತ್ತಿರುವ ಭೂ ವಿಜ್ಞಾನಿಗಳಿಗೆ ನೀಡುತ್ತಿರುವ ಮಾಸಿಕ ಸಂಚಿತ ವೇತನ ರೂ. 11390-00 ಗಳಿಗೆ ಬದಲಾಗಿ ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 7 ಎಸ್‌ಆರ್‌ಪಿ 2011, ದಿನಾಂಕ. 21-04-2012ರಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಇವರುಗಳಿಗೆ ಮಾಸಿಕ ಸಂಚಿತ ವೇತನವಾಗಿ ರೂ. 22790-00 (ರೂಪಾಯಿ ಇಪ್ಪತ್ತೆರಡು ಸಾವಿರದ ಏಳುನೂರ ತೊಂಬತ್ತು ಮಾತ್ರ) ಗಳನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸಂದಾಯ ಮಾಡಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ. ಗ್ರಾಅಪ 108 ಆಂಆಸ 2012, ದಿನಾಂಕ. 10-07-2012ರಂದು ನೀಡಿರುವ ~~ಅಭಿಪ್ರಾಯ /~~ ಸಹಮತಿಯನ್ವಯ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 330 ವೆ-06 2012, ದಿನಾಂಕ. 10-09-2012ರಂದು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಈ ವೆಚ್ಚವನ್ನು ಜಿಲ್ಲಾ ಪಂಚಾಯತ್ ಸೇವಾ ಲೆಕ್ಕ ಶೀರ್ಷಿಕೆ 2059ರಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[signature] 28/9/2012

(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು. (ನೋಂದಣಿ ಅಂಚೆ)
2. ಮಹಾಲೇಖಪಾಲರು, (ಲೆಕ್ಕಪರಿಶೋಧನೆ 1 ಮತ್ತು 2) ಕರ್ನಾಟಕ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.

4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ), ಬೆಂಗಳೂರು.
5. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ
7. ಸರ್ಕಾರದ ಪ್ರಧಾನ / ಕಾರ್ಯದರ್ಶಿ (ಪಂ.ರಾಜ್) :ಉಪ ಕಾರ್ಯದರ್ಶಿ (ಆಡಳಿತ-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
8. ಸಂಬಂಧಪಟ್ಟ ಭೂ ವಿಜ್ಞಾನಿಗಳಿಗೆ – ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ.
9. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ : ಕಂಪ್ಯೂಟರ್ ಸೆಲ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

ಆದೇಶ ಸಂಖ್ಯೆ. ಗ್ರಾಅಪ 215 ಜಿಪಅ 2012, ದಿನಾಂಕ. 28-09-2012ಕ್ಕೆ ಸಂಬಂಧಿಸಿದ

ಅನುಬಂಧ

| ಕ್ರ.ಸಂ. | ಭೂ ವಿಜ್ಞಾನಿ ಹೆಸರು | ಕಾರ್ಯನಿರ್ವಹಿಸುತ್ತಿರುವ ಕಚೇರಿ |
|---|---|---|
| 1. | ಶ್ರೀ ಎನ್.ವೆಂಕಟೇಶ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು |
| 2. | ಶ್ರೀ ಸುಕುಮಾರ್ ಎನ್. ದೇಸಾಯಿ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ |
| 3. | ಶ್ರೀ ಎಸ್.ಬಿ.ಶಿವಮೂರ್ತಿ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ |
| 4. | ಶ್ರೀ ಡಿ.ಎನ್.ಶ್ರೀನಾಥ ಶಾಸ್ತ್ರಿ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ |
| 5. | ಶ್ರೀ ಸಿ. ರಾಮಯ್ಯ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ |
| 6. | ಶ್ರೀ ಎಂ.ಮಂಜುನಾಥ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ |
| 7. | ಶ್ರೀ ಜಿ.ಎಸ್.ಶಂಕರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ |
| 8. | ಶ್ರೀ ಸಿ.ರೇವಣ್ಣ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ |
| 9. | ಶ್ರೀ ಶ್ರೀಧರ ಸಿ. ಜೋಶಿ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಳಗಾವಿ |
| 10. | ಶ್ರೀ ಕೆ.ಎಲ್.ಆನಂದಕುಮಾರ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು |
| 11. | ಶ್ರೀ ಪಿ.ಪದ್ಮನಾಭ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗುಲ್ಬರ್ಗಾ |
| 12. | ಶ್ರೀ ಹೆಚ್.ಎಂ.ಪ್ರಭುದೇವ್ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು |
| 13. | ಶ್ರೀ ಕೆ.ಎಲ್.ರವೀಂದ್ರರೆಡ್ಡಿ | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ |

28/9/12

(ಎನ್.ವೈ.ಸಾಗರ)

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.